
# ಇಂಟರ್ನೆಟ್ ಜೇಡ

ಇಂಟರ್ನೆಟ್‌ನ ಸೆಂಟರ್‌ನಲ್ಲಿ
ನೋಡಿ ಮನುಷ್ಯರ ಪಾಡ
ತಾನೇ ನೆಯ್ದ ಅಂತರ್ಜಾಲದಿ
ಕೂತು ನಗುತಿದೆ ಜೇಡ

ಗೂಗ್ಲ್ ಸರ್ಚ್ ಯಾಹೂ ಸರ್ಚ್
ಎಲ್ಲಾ ದುಡ್ಡು ಖರ್ಚು
ಈ ಮೇಲ್ ಆ ಮೇಲ್ ಎಲ್ಲಾ ಮೈ ಮೇಲ್
ಎಳೆದಾಕ್ಕೊಳ್ಳೋ ಹುಚ್ಚು

ಯಾವುದೆ ಸರ್ಚು ಯಾವುದೆ ಖರ್ಚು
ಇಲ್ಲದೆ ಬರಬೇಕ್ ತಿಂಡಿ
ಮುಂಜಾನೆದ್ದು ಕುಂತರೆ ನಮಗೆ
ಅಲ್ಲಿಗೆ ಬರುತಿದೆ ಬಂಡಿ!




# ಬಾರೆ ಬಾ ಇಬ್ಬನಿ

ಬಾರೆ ಬಾ ಇಬ್ಬನಿ
ಬಂದು ನನ್ನ ತಬ್ಬು ನಿ

ಹೂದಳಗಳ ತುಂಬ ನಿ
ಎಲೆ ಎಲೆಗಳ ಕಂಬ ನಿ
ಪ್ರತಿಸೂರ್ಯರ ಬಿಂಬ ನಿ

ಬಾನಿನಿಂದ ಬಿದ್ದು ನಿ
ಮನೆಮನೆಗಳ ಹೊದ್ದು ನಿ
ಕಿಟಕಿಯಿಂದ ಕದ್ದು ನಿ

ಬಯಲ ಮುತ್ತು ರತ್ನ ನಿ
ಬೆಟ್ಟದ ಮೇಲಣ ಬೆಳ್ಳಿ ನಿ
ಬಿಸಿಲಿಗೆ ಕರಗುವ ಚಿನ್ನ ನಿ

ಎಷ್ಟೊಂದು ಪರಿ ಶುದ್ಧ ನಿ
ಕೈಗೆ ಸಿಗದ ಕಿಬ್ಬ ನಿ
ನೋಡುವ ಕಣ್ಣಿಗೆ ಹಬ್ಬ ನಿ

ಬಾರೆ ಬಾ ಇಬ್ಬನಿ
ಬಂದು ನನ್ನ ತಬ್ಬು ನಿ

